

بِسۡمِ اللّٰہِ الرَّحۡمٰنِ الرَّحِیۡمِ

# ಮುಕರ್ರಮ್ ಬಶೀರ್ ಅಹ್ಮದ್ ರಫೀಖ್ ಸಾಹಿಬ್ ಮತ್ತು ಡಾಕ್ಟರ್ ನುಸ್ರತ್ ಜಹಾನ್ ಸಾಹಿಬ ಅವರ ಅನುಸ್ಮರಣೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಕೆನಡದ ಟೊರೋಂಟೋದ ಬೈತುಲ್ ಇಸ್ಲಾಂ ಮಸ್ಜಿದ್‌ನಿಂದ **21–10–2016** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಈ ದಿನ ನಾನು ಜಮಾಅತ್‌ಗೆ ಸೇವೆ ಸಲ್ಲಿಸಿದ ಇಬ್ಬರು ವ್ಯಕ್ತಿಗಳ ಕುರಿತು ಪ್ರಸ್ತಾಪಿಸುವೆನು. ಅವರಿಬ್ಬರೂ ಕೆಲವು ದಿನಗಳ ಹಿಂದೆ ನಿಧನ ಹೊಂದಿದರು. ಅವರಲ್ಲೊಬ್ಬರು ಮುಕರ್ರಮ್ ಬಶೀರ್ ಅಹ್ಮದ್ ರಫೀಖ್ ಖಾನ್ ಸಾಹೇಬರು ಮತ್ತು ಇನ್ನೊಬ್ಬರು ಫಝ್ಲ್ ಉಮರ್ ಆಸ್ಪತ್ರೆಯ ಗೈನಕೋಲಜಿ (ಸ್ತ್ರೀರೋಗ) ವಿಭಾಗದ ಡಾಕ್ಟರ್ ನುಸ್ರತ್ ಜಹಾಂ ಸಾಹಿಬ ಆಗಿರುವರು. ಈ ಲೋಕಕ್ಕೆ ಆಗಮಿಸಿದ ಪ್ರತಿಯೊಬ್ಬನು ಒಂದು ದಿನ ಇಲ್ಲಿಂದ ಹೋಗಬೇಕಾಗಿದೆ. ಆದರೆ ಅಲ್ಲಾಹನು ಯಾರಿಗೆ ಧಾರ್ಮಿಕ ಸೇವೆ ಸಲ್ಲಿಸಲು ಮತ್ತು ಮಾನವರಿಗೆ ಸೇವೆ ಸಲ್ಲಿಸಲು ಭಾಗ್ಯ ನೀಡುತ್ತಾನೋ ಅವರು ಅದೃಷ್ಟಶಾಲಿಗಳಾಗಿದ್ದಾರೆ. ಬಶೀರ್ ಅಹ್ಮದ್ ರಫೀಖ್ ಸಾಹೇಬರು ದೀರ್ಘಕಾಲ ದೀನೀ ಸೇವೆ ಮಾಡಿದ ಹಳೆಯ ಮುಬಲ್ಲಿಗರಾಗಿದ್ದರು. ಅವರನ್ನು ಜಮಾಅತಿನ ಆಡಳಿತೆ ವ್ಯವಸ್ಥೆಯಲ್ಲೂ ಸಹ ನೇಮಿಸಲಾಗಿತ್ತು. ಅವರು ಬಹಳ ಸಂತೋಷದಾಯಕವಾಗಿ ತಮ್ಮ ಹೊಣೆಗಾರಿಕೆಗಳನ್ನು ನಿಭಾಯಿಸುತ್ತಿದ್ದರು. ಅವರು 2016 ಅಕ್ಟೋಬರ್ 11ರಂದು ಅಂದಾಜು 85 ವರ್ಷ ಪ್ರಾಯದಲ್ಲಿ ಲಂಡನ್‌ನಲ್ಲಿ ನಿಧನ ಹೊಂದಿದರು – ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್. ಅವರು ಪಂಜಾಬ್ ಯುನಿವರ್ಸಿಟಿಯಿಂದ ಬಿ.ಎ. ಬಿರುದು ಪಡೆದರು. ಅನಂತರ ಜಾಮಿಅತುಲ್ ಮುಬಶ್ಶಿರೀನ್‌ನಿಂದ 1958ರಲ್ಲಿ ಶಾಹಿದ್ ಬಿರುದು ಪಡೆದರು. ಅವರ ತಾಯಿಯ ಹೆಸರು ಫಾತಿಮ ಬೀಬಿ ಎಂದು. ಅವರು ಹಝ್ರತ್ ಮುಹಮ್ಮದ್ ಇಲ್‌ಯಾಸ್ ಖಾನ್ ಸಾಹಿಬ್ (ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಸಹಾಬಿ)ಯವರ ಹಿರಿಯ ಪುತ್ರಿಯಾಗಿದ್ದರು. ಅವರ ತಂದೆಯವರ ಹೆಸರು ದಾನಿಶ್ ಮಂದ್ ಖಾನ್ ಸಾಹಿಬ್ ಎಂದಾಗಿತ್ತು. ಅವರು 1890ರಲ್ಲಿ ಜನಿಸಿದ್ದರು. ಅವರು ದೈವಿಕ ಸ್ವಪ್ನ ಮತ್ತು ದರ್ಶನಗಳನ್ನು ಕಾಣುವವರಾಗಿದ್ದರು. ಬಶೀರ್ ಅಹ್ಮದ್ ರಫೀಖ್ ಸಾಹೇಬರು ಅಹ್ಮದಿಯಾಗಿ ಜನಿಸಿದವರು. ಅವರ ತಂದೆ 1921ರಲ್ಲಿ ಅಹ್ಮದಿಯ್ಯತ್ ಸ್ವೀಕರಿಸಿದ್ದರು. ಆಗ ಅವರ ಊರಿನ ಜನರು ಅವರನ್ನು ಬಹಿಷ್ಕರಿಸಿದ್ದರು. ಅಲ್ಲಾಹನು ಬಶೀರ್ ಅಹ್ಮದ್ ರಫೀಖ್ ಸಾಹೇಬರ ಮೇಲೆ ಕಾರುಣ್ಯದೋರುವವನಾಗಲಿ. ಅವರ ಎಲ್ಲ ಮಕ್ಕಳು ಅವರ ವಾಸ್ತವಿಕ ವಾರೀಸುದಾರರಾಗುವಂತೆ ಅಲ್ಲಾಹನು ಮಾಡಲಿ.

ಅವರ ವಿವಾಹ 1956ರಲ್ಲಿ ಜರಗಿತು. ಅವರಿಗೆ ಮೂವರು ಪುತ್ರರೂ ಮೂವರು ಪುತ್ರಿಯರೂ ಇದ್ದಾರೆ. 1945ರಲ್ಲಿ ಖಾನ್ ಸಾಹಿಬರು ಖಾದಿಯಾನಿನ ತಅ್‌ಲೀಮುಲ್ ಇಸ್ಲಾಮ್ ಹೈಸ್ಕೂಲಿನಲ್ಲಿ ಪ್ರವೇಶಿಸಿದರು. ಅವರ ಪ್ರಾಯ ಆಗ 14ವರ್ಷ ಆಗಿತ್ತು. ಆ ಕಾಲದಲ್ಲಿ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಒಂದು ಖುತ್‌ಬದಲ್ಲಿ ಅಹ್ಮದಿ ಯುವಕರು ತಮ್ಮ ಜೀವಿತವನ್ನು ಜಮಾಅತಿನ ಸೇವೆಗೆ ಅರ್ಪಿಸಲು ಪ್ರೇರೇಪಿಸಿದ್ದರು. ಜುಮುಅ ನಮಾಝ್ ಅನುಷ್ಠಿಸಿದ ನಂತರ ಅನೇಕ ತರುಣರು ತಮ್ಮನ್ನು ಧಾರ್ಮಿಕ ಸೇವೆ ಸಲ್ಲಿಸಲು ಸಮರ್ಪಿಸಿದರು. ಆ ಅದೃಷ್ಟಶಾಲಿಗಳಲ್ಲಿ ಬಶೀರ್ ಅಹ್ಮದ್ ರಫೀಖ್ ಸಾಹೇಬರು ಒಬ್ಬರಾಗಿದ್ದರು. ಅವರು ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹುರವರ ಆಜ್ಞೆ ಪ್ರಕಾರ ಬಿ.ಎ. ಬಿರುದು ಪಡೆದರು. ಅನಂತರ ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು ಹೇಳಿದರು ಜಾಮಿಅದಲ್ಲಿ ಪ್ರವೇಶಿಸಿರಿ ಮತ್ತು ಶಾಹಿದ್ ಬಿರುದು ಪಡೆಯಿರಿ ಎಂದು. ನಿನ್ನನ್ನು ತಬ್ಲೀಗಿನ ಕ್ಷೇತ್ರಕ್ಕೆ ಕಳುಹಿಸಬೇಕೆಂದು ನಾನು ಇಚ್ಛಿಸುತ್ತೇನೆ ಎಂದು ಹೇಳಿದರು. ಹಝ್ರತ್ ಮುಸ್ಲಿಹ್ ಮೌಊದ್ ರಝಿಯಲ್ಲಾಹು ಅನ್‌ಹು, ಪ್ರತಿಯೊಬ್ಬ ವಿದ್ಯಾರ್ಥಿ ತನ್ನ ಸ್ವಂತ ಲೈಬ್ರರಿ ಹೊಂದಬೇಕೆಂದೂ ಪುಸ್ತಕಗಳನ್ನು ಖರೀದಿಸುವ ಅಭ್ಯಾಸ ಹೊಂದಬೇಕೆಂದೂ ಹೇಳಿದ್ದರು. ಇದು ಎಂತಹ ವಿಷಯವೆಂದರೆ ಜಾಮಿಅದ ಪ್ರತಿಯೊಬ್ಬ ವಿದ್ಯಾರ್ಥಿ ಯಾವಾಗಲೂ ನೆನಪಿನಲ್ಲಿಟ್ಟುಕೊಳ್ಳಬೇಕು. ಈಗ ಅಸಂಖ್ಯಾತ ಜಾಮಿಅಗಳಿವೆ. ವಾಕಿಫೀನೆ ಝಿಂದಗೀ ಸಹ ಇದ್ದಾರೆ. ಅವರೆಲ್ಲರೂ ತಮ್ಮ ಸ್ವಂತ ಲೈಬ್ರರಿ ಸಿದ್ಧಪಡಿಸಬೇಕು. ಕೆಲವು ದಿನಗಳ ಹಿಂದೆ ಲಂಡನ್‌ನಲ್ಲಿ ಮುರಬ್ಬಿಗಳ ಮೀಟಿಂಗ್ ಇತ್ತು. ಅಲ್ಲಿ ಸಹ ನಾನು ಅವರೊಂದಿಗೆ ಹೇಳಿದೆ. ಮುರಬ್ಬಿಗಳು ತಮ್ಮ ಸ್ವಂತ ಲೈಬ್ರರಿ ಹೊಂದಬೇಕೆಂದು. ಕೇವಲ ಜಮಾಅತಿನ ಲೈಬ್ರರಿಯನ್ನು ಹೊಂದಿಕೊಂಡಿರಬಾರದೆಂದು ಹೇಳಿದ್ದೆ.

ಬಶೀರ್ ಅಹ್ಮದ್ ರಫೀಖ್ ಸಾಹಿಬ್ ಹೇಳುತ್ತಾರೆ: ಜಾಮಿಅತುಲ್ ಮುಬಶ್ಶಿರೀನ್‌ನಿಂದ ಶಾಹಿದ್ ಡಿಗ್ರಿ ಪಡೆದು ನಾನು ವಕಾಲತೆ ತಬ್‌ಶೀರ್‌ನಲ್ಲಿ ಹಾಜರಾದೆ. ಮುಕರ್ರಮ್ ಮಿರ್ಝಾ ಮುಬಾರಕ್ ಅಹ್ಮದ್ ಸಾಹಿಬ್ ಆಗ ವಕೀಲುತ್ತಬ್‌ಶೀರ್ ಆಗಿದ್ದರು. ನನ್ನನ್ನು ಅವರು ಹಝ್ರತ್ ಖಲೀಫತುಲ್ ಮಸೀಹ್ ಸಾನಿಯವರ ಬಳಿ ಕರೆದುಕೊಂಡು ಹೋದಾಗ ಅವರು ಹೇಳಿದರು ಇವನನ್ನು ಇಂಗ್ಲೆಂಡಿಗೆ ಕಳುಹಿಸಬೇಕು ಎಂದು. ಇಂಗ್ಲೆಂಡಿಗೆ ಹೋಗುವ ಮೊದಲು ವಕೀಲುತ್ತಬ್‌ಶೀರ್ ನನ್ನನ್ನು ಹಝ್ರತ್ ಖಲೀಫತುಲ್ ಮಸೀಹ್ ಸಾನಿಯವರ ಬಳಿಗೆ ಪುನಃ ಕರೆದುಕೊಂಡು ಹೋದರು. ಹಝ್ರತ್ ಖಲೀಫತುಲ್ ಮಸೀಹ್ ಸವಿಸ್ತಾರವಾಗಿ ಮಾರ್ಗದರ್ಶನಗಳನ್ನು ಬರೆಯಿಸಿದರು ಮತ್ತು ಪ್ರಾರ್ಥನೆ ಮಾಡಿದರು. ಅನಂತರ ಆಲಿಂಗನ ಮಾಡಿ ಬೀಳ್ಕೊಟ್ಟರು.

1959ರಲ್ಲಿ ಬಶೀರ್ ಅಹ್ಮದ್ ರಫೀಖ್ ಖಾನ್ ಸಾಹಿಬರು ಲಂಡನ್‌ನಲ್ಲಿ ಮಸ್‌ಜಿದ್ ಫಝ್ಲ್‌ನಲ್ಲಿ ನಾಯಿಬ್ ಇಮಾಮರಾಗಿ ನೇಮಿಸಲ್ಪಟ್ಟರು. ಮುಕರ್ರಮ್ ಚೌಧರಿ ರಹ್ಮತ್ ಖಾನ್ ಸಾಹಿಬ್ ಲಂಡನ್ ಮಸ್‌ಜಿದ್ ಇಮಾಮರಾಗಿದ್ದರು.

ಅವರು 1964ರಲ್ಲಿ ಅನಾರೋಗ್ಯದ ಕಾರಣ ಮರಳಿ ಹೋದುದರಿಂದ ಬಶೀರ್ ಅಹ್ಮದ್ ರಫೀಖ್ ಖಾನ್ ಸಾಹಿಬರನ್ನು ಲಂಡನ್ ಮಸೀದಿಯ ಇಮಾಮರನ್ನಾಗಿ ನಿಶ್ಚಯಿಸಲಾಯಿತು. 1960ರಲ್ಲಿ ಅವರು ಇಂಗ್ಲಿಷ್ ಭಾಷೆಯಲ್ಲಿ ಒಂದು ಮಾಸಪತ್ರಿಕೆ **ಮುಸ್ಲಿಮ್ ಹೆರಾಲ್ಡ್** ಪ್ರಕಟಿಸಲು ಪ್ರಾರಂಭಿಸಿದರು. ಮೊದಲು ಹತ್ತು ಪುಟಗಳಿದ್ದ ಈ ಪತ್ರಿಕೆಯ ಸಂಪಾದಕರೂ ಇತರ ಕೆಲಸ ಮಾಡುವವರೂ ಅವರೇ ಆಗಿದ್ದರು. ನಂತರ 1962ರಲ್ಲಿ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬರ ಪ್ರೇರೇಪಣೆ ಪ್ರಕಾರ **ಅಖ್‌ಬಾರೆ ಅಹ್ಮದಿಯಾ** ಎಂಬ ಉರ್ದು ಪಾಕ್ಷಿಕ ಪತ್ರಿಕೆ ಪ್ರಕಟಿಸಲು ತೊಡಗಿದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಸ್ಥಾಪಿಸಿದ **ರಿವ್ಯೂ ಆಫ್ ರಿಲೀಜಿಯನ್ಸ್** ಪತ್ರಿಕೆಯ ಸಂಪಾದಕನಾಗುವ ಗೌರವ ಸಹ ಅವರಿಗೆ ಲಭಿಸಿತು. ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್ 1967ರಿಂದ ತನ್ನ ಖಿಲಾಫತ್ ಕಾಲದಲ್ಲಿ ಯುರೋಪನ್ನು ಎಂಟು ಸಾರಿ ಸಂದರ್ಶಿಸಿದ್ದರು. ಅವುಗಳ ಪೈಕಿ ಏಳರಲ್ಲಿ ಮೌಲಾನ ಬಶೀರ್ ಅಹ್ಮದ್ ರಫೀಖ್ ಸಾಹೇಬರು ಅವರ ಜೊತೆಗಿದ್ದರು. ಎರಡು ಸಂದರ್ಶನಗಳ ಕಾಲದಲ್ಲಿ ಖಲೀಫರ ಪ್ರೈವೇಟ್ ಸೆಕ್ರಿಟರಿಯಾಗಿ ಸಹ ಕಾರ್ಯನಿರ್ವಹಿಸಿದ್ದರು. ನಂತರ 1970ರಲ್ಲಿ ಅವರು ಪಾಕಿಸ್ಥಾನಕ್ಕೆ ಮರಳಿದಾಗ ಖಲೀಫತುಲ್ ಮಸೀಹ್ ಸಾಲಿಸರ ಪ್ರೈವೇಟ್ ಸೆಕ್ರಿಟರಿಯಾಗಿ ನೇಮಿಸಲ್ಪಟ್ಟರು. 1971ರಲ್ಲಿ ಪುನಃ ಲಂಡನ್‌ಗೆ ಹೋಗಿ ಅಲ್ಲಿ ತನ್ನ ಹಿಂದಿನ ಉದ್ಯೋಗವಾದ ಮಸ್‌ಜಿದ್ ಫಝ್ಲ್‌ನ ಇಮಾಮರಾದರು. 1976ರಲ್ಲಿ ಖಲೀಫತುಲ್ ಮಸೀಹ್ ಸಾಲಿಸರ ಅಮೇರಿಕ ಮತ್ತು ಕೆನಡ ಸಂದರ್ಶನ ಕಾಲದಲ್ಲಿ ಪ್ರೈವೇಟ್ ಸೆಕ್ರಿಟರಿಯಾಗಿ ಕಾರ್ಯನಿರ್ವಹಿಸಿದರು. 1978ರಲ್ಲಿ ಲಂಡನ್‌ನಲ್ಲಿ ಜರಗಿದ **ಕಸ್ರೆ ಸಲೀಬ್** ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್ ಭಾಗವಹಿಸಿದ್ದರು. ಈ ಕಾನ್ಫರೆನ್ಸ್ ಜರಗಿಸುವ ಕಾರ್ಯನಿರ್ವಾಹಕ ಸಮಿತಿಯಲ್ಲಿ ಬಶೀರ್ ಅಹ್ಮದ್ ರಫೀಖ್ ಸಾಹೇಬರು ಅಲ್ಲಿನ ಇತರ ಸದಸ್ಯರನ್ನು ಸೇರಿಸಿಕೊಂಡು ಹಗಲು ರಾತ್ರಿ ಕೆಲಸ ಮಾಡಿದ್ದರು. ಮತ್ತು ಟೀಮ್ ವರ್ಕ್ ಹೇಗೆ ಮಾಡುವುದೆಂದು ಉತ್ತಮ ಮಾದರಿ ತೋರಿಸಿದ್ದರು.

ಅವರು 1964ರಿಂದ 1970ರ ತನಕ ಮತ್ತು 1971ರಿಂದ 1979ರ ತನಕ ಇಮಾಮ್ ಮಸ್‌ಜಿದ್ ಲಂಡನ್ ಆಗಿ ಕೆಲಸ ನಿರ್ವಹಿಸಿದರು. **ಮುಸ್ಲಿಮ್ ಹೆರಾಲ್ಡ್** ಪತ್ರಿಕೆಯ ಸ್ಥಾಪಕ ಸಂಪಾದಕರಾಗಿದ್ದರು. 1961ರಿಂದ 1979ರ ತನಕ ಆ ಪತ್ರಿಕೆಯ ಸಂಪಾದಕರಾಗಿದ್ದರು. 1970ರಿಂದ 71ರ ತನಕ ಹಝ್ರತ್ ಖಲೀಫತುಲ್ ಮಸೀಹ್ ಸಾಲಿಸ್‌ರವರ ಪ್ರೈವಟ್ ಸೆಕ್ರಿಟರಿ ಯಾಗಿದ್ದರು. 1985ರಲ್ಲಿ ಅವರು ವಕೀಲುದ್ದೀವಾನ್ ತಹ್‌ರೀಕ್ ಜದೀದ್ ಆಗಿ ನೇಮಿಸಲ್ಪಟ್ಟು 1987ರ ತನಕ ಕೆಲಸ ಮಾಡಿದರು. 1982ರಿಂದ 85ರ ತನಕ ವಕೀಲುತ್ತಸ್‌ನೀಫ್ ಆಗಿ ರಬ್ವದಲ್ಲಿ ನಿಯಮಿಸಲ್ಪಟ್ಟರು. ಎಡಿಶನಲ್ ವಕೀಲುತ್ತಬ್‌ಶೀರ್ ರಬ್ವ 1983ರಿಂದ 84ರ ತನಕ, ಎಡಿಶನಲ್ ವಕೀಲುತ್ತಸ್‌ನೀಫ್ ಲಂಡನ್ 1987ರಿಂದ 97, ಎಡಿಟರ್ ರಿವ್ಯೂ ಆಫ್ ರಿಲೀಜಿಯನ್ಸ್ 83ರಿಂದ 85. ಚೆಯರ್‌ಮೇನ್ ಬೋರ್ಡ್ ಆಫ್ ಎಡಿಟರ್ಸ್ ರಿವ್ಯೂ ಆಫ್ ರಿಲೀಜಿಯನ್ಸ್ 88ರಿಂದ 95. ಮೆಂಬರ್ ಸದರ್ ಅಂಜುಮನ್ ಅಹ್ಮದಿಯಾ ಪಾಕಿಸ್ತಾನ್ 1971ರಿಂದ 85. ಮೆಂಬರ್ ಇಫ್ತಾಅ್ ಕಮಿಟಿ 1971ರಿಂದ 73. ಮೆಂಬರ್ ಖಝಾ ಬೋರ್ಡ್ 1984ರಿಂದ 87, ಇವು ಅವರು ಕಾರ್ಯನಿರ್ವಹಿಸಿದ ಕೆಲವು ಪ್ರಧಾನ ಕ್ಷೇತ್ರಗಳಾಗಿವೆ. ಅವರು ಕೆಲವು ಲೌಕಿಕ ಸಂಸ್ಥೆಗಳಲ್ಲೂ ಕೆಲಸ ಮಾಡಿದ್ದರು. ಅವರು ರೋಟರಿ ಕ್ಲಬ್ ಸದಸ್ಯರೂ ವೈಸ್ ಪ್ರೆಸಿಡೆಂಟರೂ ಆಗಿದ್ದರು. ಅನಂತರ ರೋಟರಿ ಕ್ಲಬ್ಬಿನ ಪ್ರೆಸಿಡೆಂಟ್ ಸಹ ಆಗಿದ್ದರು. 1968ರಲ್ಲಿ ಲೈಬೀರಿಯಾ ದೇಶದ ಪ್ರೆಸಿಡೆಂಟ್ ಟಬ್‌ಮೇನ್ ಅವರನ್ನು ವಿಶಿಷ್ಟ ಅತಿಥಿಯಾಗಿ ಆಹ್ವಾನಿಸಿದ್ದರು. ಅವರಿಗೆ ಲೈಬೀರಿಯಾದ ಗೌರವ ಚೀಫ್ ಆಗಿ ಬಿರುದನ್ನೂ ನೀಡಲಾಯಿತು.

ಅವರ ಪುತ್ರ ಬರೆಯುತ್ತಾರೆ: ಅವರು ಕ್ರಮಬದ್ಧವಾಗಿ ತಹಜ್ಜುದ್ ನಮಾಝ್ ಮಾಡುವವರಾಗಿದ್ದರು. ಅವರು ಬಹಳವಾಗಿ ದುಆ ಮಾಡುತ್ತಿದ್ದರು. ಯಾರ ಬಗ್ಗೆ ಪ್ರಾರ್ಥಿಸಬೇಕು ಎಂದು ಅವರ ಹೆಸರು ಬರೆದು ಮರೆತು ಹೋಗದಂತೆ ಜಾಗ್ರತೆವಹಿಸುತ್ತಿದ್ದರು. ಅಲ್ಲಾಹನು ಅವರಿಗೆ ಮಗ್‌ಫಿರತ್ ಮತ್ತು ರಹ್ಮತ್ ದಯಪಾಲಿಸಲಿ. ಅವರ ಆಧ್ಯಾತ್ಮಿಕ ಪದವಿ ಉನ್ನತಗೊಳಿಸಲಿ. ಅವರ ಮಕ್ಕಳು ನಿಷ್ಠೆಯಿಂದ ಜಮಾಅತ್‌ನೊಂದಿಗೆ ಸಂಬಂಧ ಸ್ಥಾಪಿಸಿ ಅವರ ಹೆಜ್ಜೆ ಗುರುತುಗಳಲ್ಲಿ ನಡೆಯುವವರಾಗಲಿ – ಆಮೀನ್.

ಎರಡನೆಯ ಮೃತರು, ಮೌಲಾನ ಅಬ್ದುಲ್ ಮಾಲಿಕ್ ಖಾನ್ ಸಾಹೇಬರ ಪುತ್ರಿ ಮುಹ್ತರಮ ಡಾಕ್ಟರ್ ನುಸ್ರತ್ ಜಹಾಂ ಮಾಲಿಕ್ ಸಾಹಿಬ ಆಗಿದ್ದಾರೆ. 2016 ಅಕ್ಟೋಬರ್ 11ರಂದು ಲಂಡನ್‌ನಲ್ಲಿ ಅವರ ನಿಧನವಾಯಿತು – ಇನ್ನಾಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್. ಅವರು 1951 ಅಕ್ಟೋಬರ್ 15ರಂದು ಕರಾಚಿಯಲ್ಲಿ ಜನಿಸಿದರು. ಅವರ ಪಿತ ಮೌಲಾನ ಅಬ್ದುಲ್ ಮಾಲಿಕ್ ಖಾನ್ ಸಾಹೇಬರು ನಮ್ಮ ಜಮಾಅತಿನ ಮುಬಲ್ಲಿಗರಾಗಿದ್ದರು. ಅವರು ಖಾನ್ ಝುಲ್‌ಫಿಖರ್ ಅಲೀ ಖಾನರ ಪುತ್ರರಾಗಿದ್ದರು. ಅವರು ಯು.ಪಿ.ಯ ಬಜ್‌ನೂರ್ ಜಿಲ್ಲೆಯ ನಜೀಬಾಬಾದ್ ನಿವಾಸಿಯಾಗಿದ್ದರು. ಡಾಕ್ಟರ್ ಸಾಹಿಬರ ಅಜ್ಜ 1900ರಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಪತ್ರ ಮುಖೇನ ಬೈಅತ್ ಮಾಡಿದ್ದರು. ನಂತರ 1903ರಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ಭೇಟಿಯಾದರು. ಖಾನ್ ಝುಲ್‌ಫಿಖರ್ ಅಲಿಖಾನ್ ಗೌಹರ್, ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಇಚ್ಛೆಪ್ರಕಾರ ತನ್ನ ಮಗನನ್ನು ಧಾರ್ಮಿಕ ಸೇವೆಗೆ ಅರ್ಪಿಸಿದ್ದರು. ಹಝ್ರತ್ ಅಬ್ದುಲ್ ಮಾಲಿಕ್ ಖಾನ್ ಸಾಹಿಬರನ್ನು ಆಗಲೇ ವಕ್‌ಫ್ ಮಾಡಲಾಗಿತ್ತು. 1911ರಲ್ಲಿ ಅವರು ಜನಿಸಿದರು.

ಡಾಕ್ಟರ್ ನುಸ್ರತ್ ಜಹಾಂ ಸಾಹಿಬ ಎಂ.ಬಿ.ಬಿ.ಎಸ್. ಬಿರುದು ಪಾಕಿಸ್ಥಾನದಲ್ಲಿ ಪಡೆದರು. ಅನಂತರ ಯು.ಕೆ.ಯಲ್ಲಿ ಸ್ಪೆಶಲ್ ಕೋರ್ಸ್ ಕಲಿತರು. ಅವರಿಗೆ ಬೇರೆ ಕಡೆ ಲಕ್ಷಾಂತರ ರೂಪಾಯಿ ಸಂಪಾದಿಸಬಹುದಾಗಿತ್ತು. ಆದರೆ, ಅವರು ಮಾನವರ ಸೇವೆಗೋಸ್ಕರ, ಧಾರ್ಮಿಕ ಸೇವೆಗೋಸ್ಕರ, ರಬ್ವ ಎಂಬ ಚಿಕ್ಕ ಪಟ್ಟಣದಲ್ಲಿ ವಾಸಿಸಲು ತೊಡಗಿದರು. ಆ ಸಮಯದಲ್ಲಿ ಆಸ್ಪತ್ರೆಗೆ ಅವರಂತಹ ತಜ್ಞರ ಆವಶ್ಯಕತೆಯೂ

ಇತ್ತು. ಅವರು ಆ ಆವಶ್ಯಕತೆ ಈಡೇರಿಸಿದರು. ಅವರು ಆಯುಷ್ಕಾಲವಿಡೀ ನಿಸ್ವಾರ್ಥ ಸೇವೆ ಮಾಡಿದರು. ಅದು ಬಹಳ ಉನ್ನತ ಮಟ್ಟದ ಸೇವೆಯಾಗಿತ್ತು. 1985ರಲ್ಲಿ ಅವರು ಫಝ್ಲೆ ಉಮರ್ ಆಸ್ಪತ್ರೆಯಲ್ಲಿ ಕೆಲಸ ಮಾಡತೊಡಗಿದರು. 1985 ಎಪ್ರಿಲ್ ದಿನಾಂಕ 20ರಿಂದ ಈ ಕೆಲಸ ಮಾಡುತ್ತಿದ್ದರು. ಅವರು ಈ ಎಪ್ರಿಲ್ 5ರಂದು ತನ್ನ ಚಿಕಿತ್ಸೆಗೋಸ್ಕರ ರಜೆ ಪಡೆದು ಲಂಡನ್‌ಗೆ ಬಂದರು. ಅಲ್ಲಾಹನ ಅನುಗ್ರಹದಿಂದ ಚಿಕಿತ್ಸೆ ಫಲಕಾರಿಯಾಗಿತ್ತು. ಅನಂತರ ಅವರಿಗೆ ಚೆಸ್ಟ್ ಇನ್‌ಫೆಕ್ಷನ್ (ಎದೆಯಲ್ಲಿ ಸೋಂಕು) ತಲೆದೋರಿತು. ಜಲ್ಸದ ನಂತರ ಆ ಕಾಯಿಲೆ ಗುಣವಾದಂತೆ ತೋರುತ್ತಿತ್ತು. ಆದರೆ ಪುನಃ ಅಚಾನಕವಾಗಿ ರೋಗ ಬಾಧಿಸಿತು. ಅವರು ನಿಧನ ಹೊಂದಿದರು.

ಅವರ ಅಳಿಯ ಮಖ್‌ಬೂಲ್ ಮುಬಶ್ಶಿರ್ ಸಾಹಿಬ್ ಹೇಳುತ್ತಾರೆ: "ಅಲ್ಲಾಹನ ಮೇಲೆ ಅತ್ಯಂತ ಹೆಚ್ಚು ಭರವಸೆ ಇತ್ತು. ಇಬಾದತ್ ಬಗ್ಗೆ ಉತ್ಸಾಹವಿತ್ತು. ಪವಿತ್ರ ಖುರ್‌ಆನ್‌ನೊಂದಿಗೆ ಪ್ರೀತಿ ಇತ್ತು. ಖಿಲಾಫತ್‌ನೊಂದಿಗೆ ಗಾಢವಾದ ಸಂಬಂಧ ಹೊಂದಿದ್ದರು. ಅವರು ಪೂರ್ಣ ಹೃದಯದೊಂದಿಗೆ ಖಿಲಾಫತನ್ನು ಅನುಸರಿಸುವವರಾಗಿದ್ದರು. ಸೃಷ್ಟಿಸೇವೆ ಮತ್ತು ರೋಗಿಗಳಿಗೆ ಉಪಶಮನ ನೀಡುವುದು ಅವರ ಆದ್ಯತೆಗಳಾಗಿದ್ದುವು." ಅವರು ಹೇಳಿದ ಮಾತುಗಳಿಗೆ ನಾನು ಸ್ವತಃ ಸಾಕ್ಷಿಯಾಗಿದ್ದೇನೆ. ಅವರ ಮಾತಿನಲ್ಲಿ ಉತ್ಪ್ರೇಕ್ಷೆ ಇಲ್ಲ. ಈ ಗುಣಗಳೆಲ್ಲಾ ಅವರಲ್ಲಿ ಇದ್ದವು. ಪ್ರತಿಯೊಂದು ಸರ್ಜರಿ ಮತ್ತು ಚಿಕಿತ್ಸೆಗೆ ಮೊದಲು ಪ್ರಾರ್ಥಿಸುತ್ತಿದ್ದರು. ಪ್ರತಿದಿನ ಸದಖ ಕೊಡುತ್ತಿದ್ದರು. ರಬ್ವದ ಹಿರಿಯರೊಂದಿಗೆ ತನ್ನ ರೋಗಿಗಳಿಗೋಸ್ಕರ ಪ್ರಾರ್ಥಿಸಲು ಹೇಳುತ್ತಿದ್ದರು. ಬಡ ರೋಗಿಗಳಿಗೆ ತನ್ನ ಸ್ವಂತ ಖರ್ಚಿನಿಂದ ಅಥವಾ ತನ್ನ ಸ್ನೇಹಿತರ ಖರ್ಚಿನಿಂದ ಚಿಕಿತ್ಸೆ ನಡೆಸುತ್ತಿದ್ದರು. ಜಮಾಅತಿನ ಹಣವನ್ನು ಖರ್ಚು ಮಾಡುವ ಬಗ್ಗೆ ಜಾಗರೂಕತೆ ವಹಿಸುತ್ತಿದ್ದರು. ಬಹಳ ಕಡಿಮೆ ಹಣ ಖರ್ಚಾಗುವಂತೆ ನೋಡಿಕೊಳ್ಳುತ್ತಿದ್ದರು. ಜಮಾಅತಿನ ಒಂದು ರೂಪಾಯಿ ಸಹ ವ್ಯರ್ಥವಾಗಬಾರದೆಂದು ಗಮನಿಸುತ್ತಿದ್ದರು.

ಫಝ್ಲೆ ಉಮರ್ ಆಸ್ಪತ್ರೆಯ ಡಾಕ್ಟರ್ ನುಸ್ರತ್ ಮಜೂಕ ಸಾಹಿಬ ಹೇಳುತ್ತಾರೆ: ನನಗೆ ಡಾಕ್ಟರ್ ನುಸ್ರತ್ ಜಹಾಂರೊಂದಿಗೆ 18ವರ್ಷಗಳ ಸಂಬಂಧವಿದೆ. ನಾನು ಹೌಸ್ ಜಾಬ್‌ನಿಂದ ಪ್ರಾರಂಭಿಸಿ ಫಝ್ಲೆ ಉಮರ್ ಆಸ್ಪತ್ರೆಯ ಗೈನೇಕೋಲಜಿ ವಿಭಾಗದ ಒಂದು ಭಾಗವಾದೆನು. ನನ್ನ ಪೂರ್ಣ ಪ್ರೊಫೆಶನಲ್ ಟ್ರೈನಿಂಗ್ ಅವರೇ ಮಾಡಿದ್ದರು. ಅವರು ಒಬ್ಬ ಪರಿಪೂರ್ಣ ಅಧ್ಯಾಪಿಕೆ ಆಗಿದ್ದರು. ನಮಗೆ ಜೀವಿತದ ಪ್ರತಿ ವಿಭಾಗದಲ್ಲಿ ಅವರ ಮಾರ್ಗದರ್ಶನ ಲಭಿಸುತ್ತಿತ್ತು. ಅದು ಬಲವತ್ತಾದ ಮತ್ತು ಪರಿಪೂರ್ಣವಾದುದಾಗಿತ್ತು. ಅಲ್ಲಾಹನು ಅವರಿಗೆ ಅಸಾಧಾರಣ ಸಾಮರ್ಥ್ಯಗಳನ್ನು ದಯಪಾಲಿಸಿದ್ದನು. ಅವರು ಅನುಸರಣೆಯುಳ್ಳ ಸಹಾನುಭೂತಿಯುಳ್ಳ ಓರ್ವ ಪುತ್ರಿಯಂತೆ ಇದ್ದರು. ಒಬ್ಬ ವಾತ್ಸಲ್ಯಮಯ ಮಾತೆಯೂ ಆಗಿದ್ದರು. ಅವರು ಓರ್ವ ಶಿಸ್ತುಬದ್ಧ ಅಧ್ಯಾಪಿಕೆಯೂ ಆಗಿದ್ದರು. ದುಃಖದಲ್ಲಿ ಭಾಗಿಯಾಗುವ ಸಹೋದರಿಯೂ ಸ್ನೇಹಿತೆಯೂ ಆಗಿದ್ದರು. ಅವರ ಜೀವನವಿಡೀ ತ್ಯಾಗಭರಿತವಾಗಿದೆ. ಅವರು ಜಮಾಅತ್‌ಗೆ ಸೇವೆ ಮಾಡಲು ತನ್ನ ವೈಯಕ್ತಿಕ ಜೀವಿತವನ್ನು ಬಹಳ ಹಿಂದೆ ಸರಿಸಿದರು.

ಡಾಕ್ಟರ್ ನೂರಿ ಸಾಹಿಬ್ ಹೇಳುತ್ತಾರೆ: ಕಳೆದ ಒಂಬತ್ತು ವರ್ಷಗಳಿಂದ ಡಾಕ್ಟರ್ ನುಸ್ರತ್ ಜಹಾಂರೊಂದಿಗೆ ಫಝ್ಲೆ ಉಮರ್ ಆಸ್ಪತ್ರೆಯ ಝುಬೇದ ಬಾನೀ ವಾರ್ಡ್‌ನಲ್ಲಿ ಮತ್ತು ತಾಹಿರ್ ಹಾರ್ಟ್ ಇನ್ಸಿಟ್ಯೂಟ್‌ನಲ್ಲಿ ಕೆಲಸ ಮಾಡುತ್ತಿದ್ದೆ. ಇಂದಿನ ಕಾಲದಲ್ಲಿ ಡಾಕ್ಟರ್‌ಗಳಲ್ಲಿ ಬಹಳ ಕಡಿಮೆ ಕಂಡು ಬರುವ ಉತ್ತಮ ಗುಣಗಳು ಅವರಲ್ಲಿದ್ದುವು. ಅವರು ಬಹಳ ಒಳ್ಳೆಯವರೂ ಪ್ರಾರ್ಥನೆ ಮಾಡುವವರೂ ಉನ್ನತ ಸ್ವಭಾವಗುಣ ಸಂಪನ್ನೆಯೂ ಆಗಿದ್ದರು. ಅವರು ಅಲ್ಲಾಹನಿಗೆ ಭಯಪಡುವವರೂ ತಮ್ಮ ರೋಗಿಗಳಿಗೋಸ್ಕರ ಪ್ರಾರ್ಥಿಸುವವರೂ ಆಗಿದ್ದರು. ಪರದೆಯನ್ನು ಸೂಕ್ಷ್ಮವಾಗಿ ಪಾಲಿಸುವವರಾಗಿದ್ದರು. ಪವಿತ್ರ ಖುರ್‌ಆನ್ ಬಗ್ಗೆ ವಿಶಾಲ ಜ್ಞಾನವಿರುವವರೂ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮ್ ಮತ್ತು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ನಡೆವಳಿಕೆಗಳನ್ನು ಅನುಸರಿಸುವವರೂ ಆಗಿದ್ದರು. ಅವರು ತನ್ನ ವೃತ್ತಿಯಲ್ಲಿ ಬಹಳ ನಿಪುಣೆಯಾಗಿದ್ದರು. ತಂತ್ರಜ್ಞಾನ ಬಲ್ಲವರಾಗಿದ್ದರು. ಅವರು ತನ್ನ ಜ್ಞಾನವನ್ನು ಹೊಸ ಆವಶ್ಯಕತೆಗನುಸಾರವಾಗಿ ವರ್ಧಿಸಿ ಕೆಲಸ ಮಾಡುತ್ತಿದ್ದರು. ಅವರು ಕಾರ್ಯನಿರತರಾದಾಗ ಸಮಯದ ಬಗ್ಗೆ ಪರಿವೆ ಹೊಂದಿರಲಿಲ್ಲ. ತನಗೆ ಸಿಗುವ ಸವಲತ್ತುಗಳನ್ನು ದುರುಪಯೋಗಪಡಿಸುತ್ತಿರಲಿಲ್ಲ. ಬಹಳ ತೀವ್ರವಾಗಿ ರೋಗ ಬಾಧಿತರಾದವರಿಗೋಸ್ಕರ ತನ್ನ ರಜಾಕಾಲವನ್ನು ತ್ಯಾಗಮಾಡಿ ಹನ್ನೆರಡು – ಹನ್ನೆರಡು ಗಂಟೆ ಕೆಲಸ ಮಾಡುತ್ತಿದ್ದರು. ಅವರ ಬಳಿಗೆ ಚಿಕಿತ್ಸೆ ಪಡೆಯಲು ಬಹಳಷ್ಟು ಅಹ್ಮದಿಯೇತರ ರೋಗಿಗಳು ಸಹ ಬರುತ್ತಾ ಇದ್ದರು. ಅವರು ಒಮ್ಮೆ ಹೇಳಿದರು: ಚಿನಿಯೂಟಿಯ ಒಬ್ಬ ಅಹ್ಮದಿಯೇತರ ಮೌಲವಿ ಚಿಕಿತ್ಸೆಗೆ ಬಂದಿದ್ದರು. ಅವರ ಪತ್ನಿಗೆ ಮಕ್ಕಳಾಗುತ್ತಿರಲಿಲ್ಲ. ಡಾಕ್ಟರ್ ಸಾಹಿಬರು ಚಿಕಿತ್ಸೆ ನಡೆಸಿದಾಗ ಅಲ್ಲಾಹನು ಅನುಗ್ರಹಿಸಿದನು. ಮೌಲವಿಯ ಪತ್ನಿ ಗರ್ಭ ಧರಿಸಿದರು. ಆಗ ಡಾಕ್ಟರ್ ಸಾಹಿಬ ಹೇಳಿದರು: ಈ ಮೌಲವಿ ಒಂಬತ್ತು ತಿಂಗಳು ನನ್ನ ಸ್ವಾಧೀನದಲ್ಲಿರುತ್ತಾರೆ ಎಂದು. ಆ ಮೌಲವಿಗೆ ಚೆನ್ನಾಗಿ ತಬ್ಲೀಗ್ ಮಾಡಿದರು.

ರಬ್ವದ ನಮ್ಮ ಜಾಮಿಅದ ಪ್ರಿನ್ಸಿಪಾಲ್ ಆಗಿರುವ ಮುಬಶ್ಶಿರ್ ಅಯಾಝ್ ಸಾಹಿಬ್, ಡಾಕ್ಟರ್ ಸಾಹಿಬ ಪರದೆ ಧರಿಸುತ್ತಿದ್ದ ಬಗ್ಗೆ ಮತ್ತು ಶಿಸ್ತಿನ ಬಗ್ಗೆ ಈ ರೀತಿ ಬರೆಯುತ್ತಾರೆ: ನಮ್ಮ ಡಾಕ್ಟರ್ ಸಾಹಿಬ ಬುರ್ಖ ಧರಿಸಿ ಪರದೆಯ ಉತ್ತಮ ಮಾದರಿಯಾಗಿದ್ದರು. ಅವರು ಯುವ ಸೈನಿಕರ ಹಾಗೆ ಓಡಾಡುತ್ತಿದ್ದರು. ಪರದೆ ತಡೆಯಾಗಿದೆ ಎಂದು ಹೇಳುವವರಿಗೆ ಈ ಡಾಕ್ಟರ್ ಸಾಹಿಬ ಮಾದರಿಯಾಗಿದ್ದಾರೆ. ಅವರ ಸ್ಟಾಫ್ ನರ್ಸ್ ಆಗಿದ್ದ ಜಮೀಲ ಸಾಹಿಬ ಬರೆಯುತ್ತಾರೆ: ಡಾಕ್ಟರ್ ಸಾಹಿಬರ ವಫಾತ್‌ನಿಂದ ಬಹಳ ದುಃಖವಾಗಿದೆ. ಅವರು ಬಹಳ ಉತ್ತಮ ಸ್ವಭಾವ ಗುಣಗಳನ್ನು ಹೊಂದಿದವರಾಗಿದ್ದರು. ನಮ್ಮೆಲ್ಲರ ಬಗ್ಗೆ ಬಹಳ ಲಕ್ಷ್ಯ ನೀಡುವವರಾಗಿದ್ದರು. ನಮ್ಮನ್ನು ಮಕ್ಕಳ ಹಾಗೆ ಪ್ರೀತಿಸುತ್ತಿದ್ದರು. ನಮ್ಮ ಬಗ್ಗೆ ಬಹಳ ಕಾಳಜಿ ವಹಿಸುತ್ತಿದ್ದರು.

ಬಡ ರೋಗಿಗಳಿಗೆ ಫೀಸು ಮರಳಿ ಕೊಡುತ್ತಿದ್ದರು ಮಾತ್ರವಲ್ಲ ಮದ್ದು ಸಹ ಉಚಿತವಾಗಿ ನೀಡುತ್ತಿದ್ದರು.

ಡಾಕ್ಟರ್ ಸಾಹಿಬರ ಒಬ್ಬ ಮಹಿಳೆ ರೋಗಿ ಬರೆಯುತ್ತಾರೆ: ಅವರು ನನ್ನ ಚಿಕಿತ್ಸೆ ಮಾಡುತ್ತಿದ್ದರು. ನಾನು ವಾಕಿಫೆ ಝಿಂದಗಿಯ ಪತ್ನಿಯಾದ ಕಾರಣ ವಿಶೇಷ ಗಮನ ಹರಿಸಿದ್ದರು. ಒಮ್ಮೆ ಅಲ್ಟ್ರಾ ಸೌಂಡ್ ಟೆಸ್ಟ್ ಮಾಡಲಿಕ್ಕಿತ್ತು. ಅವರು ತನ್ನ ಸಹಾಯಕನೊಂದಿಗೆ ಟೆಸ್ಟ್ ಮಾಡಿಸಿ ತರಲು ಹೇಳಿದರು. ಟೆಸ್ಟ್ ಮಾಡುವ ಸ್ಥಳದಲ್ಲಿ ಬಹಳ ಜನರಿದ್ದರು. ಒಂದು ಕುರ್ಚಿಯಲ್ಲಿ ಒಬ್ಬ ಬಡರೋಗಿ ಮಹಿಳೆ ಕುಳಿತಿದ್ದರು. ಆಗ ಅಸಿಸ್ಟೆಂಟ್ ಆ ರೋಗಿಯಾದ ಮಹಿಳೆಯನ್ನು ಎಬ್ಬಿಸಿ ಡಾಕ್ಟರ್ ಕಳುಹಿಸಿದ ರೋಗಿಯಾದ ನನ್ನನ್ನು ಅದರಲ್ಲಿ ಕೂರಿಸಲು ಪ್ರಯತ್ನಿಸಿದರು. ಆಗ ಹಿಂದಿನಿಂದ ಒಂದು ಶಬ್ದ ಕೇಳಿಸಿತು. ಇಲ್ಲ ಇಲ್ಲ, ಆ ಕುರ್ಚಿಯಲ್ಲಿ ಅವರೇ ಕುಳಿತು ಕೊಳ್ಳಬೇಕು ಎಂದು ಹೇಳುತ್ತಾ ಡಾಕ್ಟರ್ ಸ್ವತಃ ಒಂದು ಕುರ್ಚಿ ಎತ್ತಿಕೊಂಡು ಬಂದಿದ್ದರು. ಅವರು ಬಡರೋಗಿ ಮಹಿಳೆಗೆ ಆಕೆಯನ್ನು ಎಬ್ಬಿಸಿದರೆ ಉಂಟಾಗುವ ಮನೋವೇದನೆ ಗಮನಿಸಿದ್ದರು. ಆದುದರಿಂದ ನನಗಾಗಿ ಬೇರೊಂದು ಕುರ್ಚಿಯನ್ನು ಸ್ವತಃ ತಂದಿದ್ದರು.

ಅವರ ಪುತ್ರಿ ನುದ್ರತ್ ಆಯಿಶಾ ಸಾಹಿಬ ಹೇಳುತ್ತಾರೆ: ನನ್ನ ತಾಯಿ ಓರ್ವ ಮಾದರಿ ಮಾತೆ ಮತ್ತು ಅತ್ಯಂತ ಪ್ರೀತಿಸುವವರಾಗಿದ್ದರು. ಅವರು ನನಗೋಸ್ಕರ ಮತ್ತು ನನ್ನ ಮಕ್ಕಳಿಗೋಸ್ಕರ ಅಪರಿಮಿತವಾಗಿ ಪ್ರಾರ್ಥಿಸುತ್ತಿದ್ದರು. ನನಗೆ ಏನಾದರೂ ಕಷ್ಟ ಉಂಟಾದರೆ ತಾಯಿಗೆ ಫೋನ್ ಮಾಡಿ ನಿಶ್ಚಿಂತಳಾಗುತ್ತಿದ್ದೆ. ಅಲ್ಲಾಹನ ಅನುಗ್ರಹದಿಂದ ಕಷ್ಟ ನಿವಾರಣೆ ಆಗುತ್ತಿತ್ತು. ಆಗ ತಾಯಿ ಹೇಳುತ್ತಿದ್ದರು ನೀನು **ಸಜ್‌ದಯೆ ಶುಕ್ರ್** ಮಾಡು ಎಂದು. ಅವರಿಗೆ ತೀರಾ ಬಿಡುವು ಇಲ್ಲವಾದರೂ ನನ್ನ ಪಾಲನೆ ಪೋಷಣೆಗೆ ಪ್ರಮುಖ ಪಾತ್ರ ವಹಿಸಿದರು. ಅವರು ಬಹಳ ಧೈರ್ಯಶಾಲಿಯಾಗಿದ್ದರು. ಅವರು ನನಗೆ ತಂದೆ ಮತ್ತು ತಾಯಿಯಾಗಿದ್ದರು. ಮಗಳಿಗೆ ಸರಿಯಾಗಿ ಆರೈಕೆ ಮಾಡಲಿಲ್ಲ ಎಂದು ಭಾವಿಸುವಾಗ ಹೇಳುತ್ತಿದ್ದರು ನಾನು ನನಗೆ ಬಿಡುವು ಇಲ್ಲದ ಕಾರಣ ನನ್ನ ಮಗಳಿಗೋಸ್ಕರ ಹೆಚ್ಚು ಸಮಯ ನೀಡಲಾರೆ. ಆದರೆ ಕೂಡಲೆ ಹೇಳುತ್ತಿದ್ದರು. ಮಾನವರ ಸೇವೆಗೋಸ್ಕರ ವಿನಿಯೋಗಿಸುವ ಸಮಯ ಹೆಚ್ಚು ಮಹತ್ವಪೂರ್ಣವಾಗಿದೆ. ಅಲ್ಲಾಹನು ನನ್ನ ಮಕ್ಕಳ ವ್ಯವಸ್ಥೆ ಸ್ವತಃ ಮಾಡುವನು ಎಂದು ಹೇಳುತ್ತಿದ್ದರು. ಅವರು ಯಾವಾಗಲೂ ಹೇಳುತ್ತಿದ್ದರು– ನಿನ್ನ ತಾಯಿಯ ತಂದೆಯವರು ತನ್ನ ಮಕ್ಕಳಿಗೆ ಎರಡು ವಿಷಯಗಳನ್ನು ಉಪದೇಶಿಸಿದ್ದರು. ಒಂದು ತವಕ್ಕಲ್ ಅಲಲ್ಲಾಹ್ (ಅಲ್ಲಾಹನ ಮೇಲೆ ಭರವಸೆ ಇಡುವುದು). ಎರಡನೆಯದು ಖಿಲಾಫತ್‌ನೊಂದಿಗೆ ಸಂಬಂಧ ಹೊಂದುವುದು. ಇದೇ ಉಪದೇಶ ನಾನು ಸಹ ನಿಮಗೆ ನೀಡುತ್ತೇನೆ. ಅಲ್ಲಾಹನ ಬಗ್ಗೆ ಭರವಸೆ ಹೊಂದು. ಎರಡನೆಯದಾಗಿ ಖಿಲಾಫತ್‌ನೊಂದಿಗೆ ನಿನ್ನನ್ನೂ ನಿನ್ನ ಮಕ್ಕಳನ್ನೂ ಜೋಡಿಸು.

ಪುತ್ರಿ ಪುನಃ ಹೇಳುತ್ತಾರೆ: ನನ್ನ ಮಗಳು ಆದಿಯ ಹದಿನೈದು ದಿವಸಕ್ಕೆ ರಬ್ವಕ್ಕೆ ಬಂದಿದ್ದಳು. ಅವಳನ್ನು ತನ್ನ ವಿಭಾಗದಲ್ಲಿ ಕೆಲಸ ಮಾಡಲು ತನ್ನ ತಾಯಿ ಕರೆದರು. ಟೈಪಿಂಗ್ ಮಾಡಲು ಬಾ ನಿನ್ನ ಸ್ಪೀಡ್ ಹೆಚ್ಚಿಗೆ ಇದೆ ಎಂದು ಹೇಳಿದ್ದರು. ಇದೊಂದು ಪುಣ್ಯ ಕಾರ್ಯ ನೀನು ಈ ಪುಣ್ಯದಲ್ಲಿ ಭಾಗಿಯಾಗು ಎಂದು ಹೇಳಿದ್ದರು. ಅವರಿಗೆ ತನ್ನ ಕೆಲಸದ ಬಗ್ಗೆ ಎಷ್ಟು ಅಭಿರುಚಿ ಇತ್ತೆಂದರೆ ರೋಗದ ಕೊನೆಯ ಘಟ್ಟದಲ್ಲಿ ಆಸ್ಪತ್ರೆಯ ಹೆಸರು ಆಲಿಸಿದಾಗ ಅವರ ಮುಖದಲ್ಲಿ ಮುಗುಳು ನಗೆ ಕಾಣಿಸುತ್ತಿತ್ತು. ಅವರು ಪ್ರಜ್ಞೆಯಲ್ಲಿದಾಗ ಸಹ ಆಸ್ಪತ್ರೆಯ ಓಪರೇಷನ್ ಥಿಯೇಟರ್ ಮತ್ತು ಅಲ್ಲಿರುವ ಯಂತ್ರಗಳನ್ನು ನಿರ್ಮಿಸಿದ ಕಂಪೆನಿಯ ಹೆಸರು ಹೇಳುತ್ತಿದ್ದರು. ಆಂಗ್ಲೇಯ ನರ್ಸ್‌ಗಳು ಆಶ್ಚರ್ಯಗೊಂಡು ನನ್ನೊಂದಿಗೆ ವಿಚಾರಿಸುತ್ತಿದ್ದರು. ಅವರು ಏನು ಹೇಳುತ್ತಿದ್ದಾರೆಂದು. ಅವರಿಗೆ ಅಲ್ಲಾಹನ ಬಗ್ಗೆ ಬಹಳ ಭರವಸೆ ಇತ್ತು. ರೋಗ ಬಾಧೆಯ ಕಾರಣ ಕೆಲವು ದಿನ ಮಾತನಾಡಲಾಗುತ್ತಿರಲಿಲ್ಲ. ಆಗ ಸ್ಪೀಕಿಂಗ್ ವಾಲ್ವ್ ಜೋಡಿಸಿದಾಗ ಅವರು ಹೇಳಿದ ಮೊದಲ ಮಾತು ಮಗಳೇ ಅಲ್ಲಾಹನಿಗೆ ವಹಿಸಿಕೊಡು ಎಂದು ಹೇಳಿದರು. ನಾನು ಅಳಲು ಪ್ರಾರಂಭಿಸಿದೆ. ಕಣ್ಣಿನಿಂದ ಅಲ್ಲಾಹನ ಕಡೆಗೆ ಶ್ರದ್ಧೆ ಹರಿಸಲು ಸಂಜ್ಞೆ ಮಾಡುತ್ತಿದ್ದರು.

ಅಲ್ಲಾಹನು ಅವರ ಈ ಏಕಮಾತ್ರ ಪುತ್ರಿಗೆ ಸಹನೆ ಮತ್ತು ಧೈರ್ಯ ದಯಪಾಲಿಸಲಿ. ಅವರಿಗೆ ಅವರ ತಾಯಿ ನೀಡಿದ ಉಪದೇಶವನ್ನು ಮತ್ತು ಅವರಿಂದ ಬಯಸಿರುವುದನ್ನು ಈಡೇರಿಸಲು ಅಲ್ಲಾಹನು ಭಾಗ್ಯ ನೀಡಲಿ. ಅಲ್ಲಾಹನು ಈ ಮಗಳನ್ನು ಮತ್ತು ಅವರ ಮಕ್ಕಳನ್ನೂ ಸಂರಕ್ಷಿಸಲಿ. ಮೃತಳ ಆಧ್ಯಾತ್ಮಿಕ ಪದವಿ ಉನ್ನತವಾಗಲಿ. ಫಝ್‌ಲೆ ಉಮರ್ ಆಸ್ಪತ್ರೆಗೆ ಅಲ್ಲಾಹನು ನಿಷ್ಠೆಯಿಂದ ಸೇವೆ ಮಾಡುವ ಮತ್ತು ಜಮಾಅತ್‌ನೊಂದಿಗೆ ಮತ್ತು ಖಿಲಾಫತ್‌ನೊಂದಿಗೆ ನಿಷ್ಠೆಯ ಸಂಬಂಧ ಸ್ಥಾಪಿಸುವ ಡಾಕ್ಟರ್‌ಗಳನ್ನು ಒದಗಿಸುವವನಾಗಲಿ – ಆಮೀನ್.

*****


***Friday Sermon delivered by Hadrath Khaleefatul Masih Al Khamis*** *(atba)*

*At, Baitul Islam Mosque, Toronto, Canada. U.S.A on 21-10-2016.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon